ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕ (Leaf & Tissue Analysis Lab)ಸಹಾಯಧನ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಗಳು:

ತೋಟಗಾರಿಕೆ ಬೆಳೆಗಳ ಸರ್ವತೋಮುಖ ಬೆಳವಣಿಗೆ ,ಸಮಾಧನಕರ ಇಳುವರಿ ಮತ್ತು ಶ್ರೇಷ್ಠ ಗುಣಮಟ್ಟವನ್ನು ಹೊಂದಲು ಅವುಗಳಿಗೆ ಶಾಸ್ತ್ರೀಯ / ವೈಜ್ಞಾನಿಕ ರೀತಿಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆಯನ್ನು ಸಾಧಿಸುವುದರ ಅಗತ್ಯತೆ ಇದೆ. ಸಸ್ಯಗಳಿಗೆ ಬೇಕಾಗುವ ಪೋಷಕಾಂಶಗಳ ಅಗತ್ಯತೆಯನ್ನು ಚಿತ್ರಣವನ್ನು ತಿಳಿದುಕೊಳ್ಳಲು ಎಲೆ ಮತ್ತು ಅಂಗಾಂಶ ವಿಶ್ಲೇಷಣೆ ಮಾಡಬೇಕಾಗಿರುತ್ತದೆ.ಇದಕ್ಕಾಗಿ ಸುಸಜ್ಜಿತ ಪ್ರಯೋಗಶಾಲೆಗಳನ್ನು ಪ್ರಾರಂಬಿಸುವುದರ ಅವಶ್ಯಕತೆ ಇದೆ.

ಈ ಘಟಕದ ಅನುದಾನವನ್ನು ಸರ್ಕಾರ/ ಸರ್ಕಾರೇತರ ಸಂಘ ಸಂಸ್ಥೆಗಳು / ಖಾಸಗಿಯವರಿಗೆ ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕಕ್ಕೆ ಅಗತ್ಯವಿರುವ ಮೂಲ ಸೌಕರ್ಯವನ್ನು ನಿರ್ಮಿಸಿಕೊಳ್ಳಲು ಉಪಯೋಗಿಸಬಹುದು.

ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ಶೇ 100 ರಷ್ಟು ಅಂದರೆ, ರೂ 25.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ ಹಾಗೂ ಖಾಸಗಿ ವಲಯದ ಸಂಸ್ಥೆಗಳಿಗೆ ಶೇ 50 ರಷ್ಟು ಅಂದರೆ, ರೂ 12.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.

ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕದ ಅಂದಾಜು ವೆಚ್ಚದ ವಿವರ:

(ರೂ. ಲಕ್ಷಗಳಲ್ಲಿ)

Sl. No	Components	Estimated Cost
1	Building – Construction/Renovation for Leaf Tissue Analysis lab	4.00
2	**Equipments**	
3	BOD Incubator, Flame Photometer, Shaker, Stereo Binocular Microscope, pH Meter, Micro Kjeldahl unit, Conductivity Bridge, Water Double Distillation units, Water Bath, Microwave Oven, Spectro Meter, Flash Evaporator, Analytical Balance	20.00
	Contingency	1.00
	Total	**25.00**

ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವರ:

- ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕ ನಿರ್ಮಿಸಲು ಉದ್ದೇಶಿಸುವ ಫಲಾನುಭವಿಯ ಹೆಸರಿನಲ್ಲಿ ಜಮೀನು ಹೊಂದಿರಬೇಕು.ಸದರಿ ಜಮೀನು ಕೃಷಿಯೇತರ ಪ್ರಯೋಗಕ್ಕಾಗಿ ಪರಿವರ್ತನೆಯಾಗಿರಬೇಕು. ಪ್ರಯೋಗಾಲಯ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ (NOC) ಪಡೆದುಕೊಳ್ಳುವುದು.
- ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕ ನಿರ್ಮಾಣಕ್ಕೆ ರಾಷ್ಟ್ರೀಕೃತ ಬ್ಯಾಂಕ್ ನಿಂದ ಸಾಲ ಪಡೆದಿರುವ ಸಾಲ ಮಂಜೂರಾತಿ ಪತ್ರ ಹಾಗೂ appraisal letter ನೀಡುವುದು.
- ಖಾಸಗಿ ವಲಯದಲ್ಲಿ ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕವನ್ನು ಸ್ಥಾಪಿಸಲು ಆಸಕ್ತಿ ಉಳ್ಳವರು ಈ ವಿಭಾಗದಲ್ಲಿ ಪರಿಣತಿ ಹೊಂದಿರಬೇಕು ಅಥವಾ ಪರಿಣತಿ ಹೊಂದಿರುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದು. ನೇಮಕ ಮಾಡಿಕೊಳ್ಳುವ ಸಿಬ್ಬಂದಿಯ ವಿದ್ಯಾರ್ಹತೆ ಹಾಗೂ ಅನುಭವದ ವಿವರ ನೀಡುವುದು.
- ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕ ಕಟ್ಟಿದ ಅಂದಾಜು ವೆಚ್ಚ ಹಾಗೂ ನಕ್ಷೆಯನ್ನು ನೊಂದಾಯಿತ ಇಂಜಿನಿಯರ್ ಅಥವಾ Architect ಅಥವಾ ಸರ್ಕಾರದ ಯಾವುದೇ ಇಲಾಖೆಯ ಇಂಜಿನಿಯರ್ ರವರಿಂದ ಧೃಡೀಕರಿಸುವುದು ಕಡ್ಡಾಯ.
- ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕವನ್ನು ಸದರಿ ಜಾಗದಲ್ಲಿ ನಿರ್ಮಿಸುತ್ತಿರುವುದ್ದರಿಂದ ಆಗುವ ಸಾಮಾಜಿಕ ಪ್ರಯೋಜನಗಳು ಹಾಗೂ ಸುತ್ತಲಿನ ಯಾವ ಪ್ರದೇಶಗಳಿಗೆ ಅನುಕೂಲವಾಗುತ್ತದೆ ಎಂಬ ವಿವರ.
- ಸದರಿ ಕೇಂದ್ರದಲ್ಲಿ ಪ್ರತಿ ಮಾದರಿ (Sample) ವಿಶ್ಲೇಷಣೆಯನ್ನು ರೈತರಿಗೆ ಯಾವ ದರದಲ್ಲಿ ಮಾಡಿಕೊಡಲಾಗುತ್ತದೆ ಎಂಬ ವಿವರ.
- ಸದರಿ ಪ್ರಯೋಗಾಲಯದ ಆರ್ಥಿಕ ಸುಸ್ಥಿರತೆ/ ಆದಾಯವನ್ನು ಕಾಪಾಡಿಕೊಳ್ಳಲು ನಿಗಧಿಪಡಿಸಿಕೊಂಡಿರುವ ಮಾನದಂಡಗಳು.
- ಸದರಿ ಪ್ರಯೋಗಾಲಯದ ವಿವಧ ಕಟ್ಟಡದ ಕಾಮಾಗಾರಿ ಹಾಗೂ ಉಪಕರಣಗಳ ಖರೀದಿಯ ಅನುಷ್ಠಾನ ವೇಳಾ ಪಟ್ಟಿ
- ಸದರಿ ಪ್ರಯೋಗಾಲಯಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಇತರೇ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದನ್ನು ರೂ .100 ಛಾಪಾ ಕಾಗದದಲ್ಲಿ ಬರೆದುಕೊಟ್ಟ ಮುಚ್ಚಳಿಕೆ ಪತ್ರ.

- ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕದ ಪ್ರಸ್ತಾವನೆಯಲ್ಲಿ ತಿಳಿಸುವ ಉಪಕರಣಗಳ ಬಿಲ್ಲು / ಕೋಟೆಷನ್ ನೀಡುವುದು.
- ಸಾರ್ವಜನಿಕ ವಲಯದ ಪ್ರಸ್ತಾವನೆಯಗಿದ್ದಲ್ಲಿ ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕದಲ್ಲಿ ಪ್ರತಿ ವರ್ಷ ವಿಶ್ಲೇಷನೆಗೆ ಅವಶ್ಯಕವಿರುವ Recurring Cost ಗಳಾದ ರಾಸಾಯನಿಕ ವಸ್ತುಗಳ ಖರೀದಿಗೆ, ವಿದ್ಯುತ್ ಸೌಲಭ್ಯಕ್ಕೆ ಸಿಬ್ಬಂದಿಗಳ ವೇತನ ಹಾಗೂ ಇತರೇ ವೆಚ್ಚಕ್ಕೆ ತಗಲುವ ವೆಚ್ಚವನ್ನು ಭರಿಸಲು ಸಂಬಂಧಿಸಿದ ಸಂಶೋದನಾ ಸಂಸ್ಥೆಯು MOU ನೀಡುವುದು.
- SWOT Analysis
- Backward and Forward linkage
- Economic feasibility of the Project(IRR, NPW, Break even point, DSER,DER, Benefit Cost Ratio, Profitability Statement)

ಸಹಾಯಧನ ವಿತರಣೆ:

- ಎಲೆ ಮತ್ತು ಅಂಗಾಂಶ ವಿಶ್ಲೇಷಣಾ ಘಟಕದ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಪ್ರಸ್ತಾವನೆಯಲ್ಲಿ ನೀಡಿರುವ ಎಲ್ಲಾ ಉಪಕರಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯು ಸ್ಥಳ ಪರಿಶೀಲನೆ ಮಾಡಿ ಖಚಿತ ಪಡಿಸಿಕೊಂಡ ನಂತರವೇ ಅಂತಿಮ ವಾಗಿ ಸಹಾಯಧನವನ್ನು ಬಿಡುಗಡೆ ಮಾಡುವುದು.
- ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (Logo) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಸಸ್ಯ ಆರೋಗ್ಯ ಕೇಂದ್ರದ ಮುಂಬಾಗದಲ್ಲಿ ಪ್ರದರ್ಶಿಸಬೇಕು.
- ಈ ಕಾರ್ಯಕ್ರಮದ Credit linked back ended subsidy ಯಾಗಿದ್ದು, ಸಹಾಯಧನದ ಮೊತ್ತವನ್ನು ಮಾರ್ಗಸೂಚಿಯ ಪ್ರಕಾರ ಬ್ಯಾಂಕ್ ಸಾಲದ ಖಾತೆಗೆ ಜಮಾ ಮಾಡುವುದು.

ಆರ್ಥಿಕ ಪ್ರತ್ಯಾ ಯೋಜನೆ (Delegation of power):

- NHM ಯೋಜನೆಯ ಮಾರ್ಗಸೂಚಿಯಂತೆ ರೂ. 25.00 ಲಕ್ಷಗಳವರೆಗೆ ತೋಟಗಾರಿಕೆ ಮಿಷನ್ ನಿರ್ದೇಶಕರಿಗೆ ಅವಕಾಶ ಇರುತ್ತದೆ. ಅದರಿಂದ ಜಿಲ್ಲಾಮಟ್ಟದಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಂಜೂರಾತಿಗಾಗಿ ಕಳುಹಿಸುವುದು.

- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನೆಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ KSHMA ಮತ್ತು ತೋಟಗಾರಿಕೆ ಉಪ ನಿರ್ದೇಶಕರವರಿಗೆ ಸಲ್ಲಿಸುವುದು.

ಮಿಷನ್ ನಿರ್ದೇಶಕರು

ಹಾಗೂ

ತೋಟಗಾರಿಕೆ ನಿರ್ದೇಶಕರು

Check List

1.	Name of the Project
2.	Name and Address of the Organization
3.	Name and address with telephone no. of the key person in-charge of the project
4.	Co-Principal Investigators
5.	Brief back ground of the project
6.	Objectives
7.	Location of the Project and availability of building for the purpose
8.	Justification for creating a facility in the area.
9.	Cost of the project
10.	Means of finance
11.	Area of operation with special reference to NHM Districts.
12.	Number of Farmers to be benefited.
13	Economics of project along with, profitability and cost at which services will be made available to farmers.
14	Certificate Stating the subsidy has not been received from any other source.
15	Social Benefits.
16.	Commitment of the organization for deployment of experts and staff to the project for continuity and accountability
17	Details of the sustainability of the project with special reference to its capacity to generate income, as only one time grant is available.
18	Implementation Schedule
19	Cost Benefit Ratio
20	Bank Loan & Appraisal letter
21	Building Plan & estimate
23	Subsidy Recommended by DDH